ಓಎಸ್ 73/2024

ಡಿಡಬ್ಲ್ಯೂ 1

**ಸಾಕ್ಷಿಯು ದಿಃ 04.12.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ವಕೀಲರಿಂದ**

ರಾಮರಾವ್ ರವರ ಮಗ ಸುಬ್ರಹ್ಮಣ್ಯರಾವ್ ರವರು ನನ್ನ ತಂದೆ ನರಸಿಂಗರಾವ್ ರವರ ತಮ್ಮನಾಗಿರುತ್ತಾರೆ. ನನ್ನ ತಂದೆಯ ತಂದೆ ರಾಮರಾವ್ ರವರಿಗೆ 3 ಜನ ಮಕ್ಕಳು ಎಂದರೆ ಸರಿ. ಹಳ್ಳದ ಮಾದಹಳ್ಳಿ ಗ್ರಾಮದ ಸರ್ವೇ ನಂಬರ್ 86 ಮತ್ತು 87ರ ಆಸ್ತಿಗಳು ಸದರಿ 3 ಜನ ಮಕ್ಕಳಿಗೂ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ರಾಮರಾವ್ ರವರ 3 ಜನ ಮಕ್ಕಳು ಪಿತ್ರಾರ್ಜಿತ ಆಸ್ತಿಗಳನ್ನು ಭಾಗ ಮಾಡಿಕೊಳ್ಳುವಾಗ ಸರ್ವೇ ನಂಬರ್ 86 ರಲ್ಲಿ ತಲಾ 2 ಎಕರೆ 5 ಗುಂಟೆ ಹಿಸ್ಸೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಅದೇ ರೀತಿ ಸರ್ವೇ ನಂಬರ್ 87 ರಲ್ಲಿ 3 ಜನ ಮಕ್ಕಳಿಗೂ ತಲಾ 1 ಎಕರೆ 25 ಗುಂಟೆ ಹಿಸ್ಸೆ ಬಂದಿರುತ್ತದೆ ಎಂದರೆ ಸರಿ. ಸದರಿ ವಿಭಾಗದಂತೆ ರಾಮರಾವ್ ರವರ 3 ಜನ ಮಕ್ಕಳಿಗೂ ಪ್ರತ್ಯೇಕವಾಗಿ ಖಾತೆ ವರ್ಗಾವಣೆಗೊಂಡಿರುತ್ತದೆ ಎಂದರೆ ಸರಿ.

2. ಸರ್ವೇ ನಂಬರ್ 86 ಮತ್ತು 87 ರಲ್ಲಿ ಸುಬ್ರಹ್ಮಣ್ಯ ರಾವ್ ರವರ ಹೆಸರಿನಲ್ಲಿ ಆಸ್ತಿಗಳು ಖಾತೆ ಇರುವ ಬಗ್ಗೆ ನನಗೆ ಮೊದಲಿನಿಂದಲೂ ಗೊತ್ತು ಎಂದರೆ ಸರಿ. ಸರ್ವೇ ನಂಬರ್ 86 ಮತ್ತು 87 ರಲ್ಲಿ ಸುಬ್ರಹ್ಮಣ್ಯರಾವ್ ರವರ ಹೆಸರಿಗೆ ಆಸ್ತಿಗಳು ಖಾತೆಯಾದ ನಂತರ ಅವುಗಳನ್ನು ಸುಬ್ರಹ್ಮಣ್ಯರಾವ್ ರವರು ಪ್ರತ್ಯೇಕವಾಗಿ ಬೇಸಾಯ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಸುಬ್ರಹ್ಮಣ್ಯರಾವ್ ರವರ ಹಿಸ್ಸೆಗೆ ಬಂದಿರುವ ಸರ್ವೇ ನಂಬರ್ 86 ಮತ್ತು 87 ಆಸ್ತಿಗಳು ಒಂದಕ್ಕೊಂದು ತಾಗಿದಂತಿವೆ ಇವೆ ಎಂದರೆ ಸರಿ. ಸುಬ್ರಹ್ಮಣ್ಯರಾವ್ ರವರ ಹಿಸ್ಸೆಗೆ ಬಂದಿರುವ ಸರ್ವೇ ನಂಬರ್ 86 ಮತ್ತು 87ರ ಆಸ್ತಿಯ ಪೂರಾ ಚೆಕ್ಕುಬಂದಿ ಪೂರ್ವಕ್ಕೆ ಚನಲ್ ರಸ್ತೆ, ಪಶ್ಚಿಮಕ್ಕೆ ಸರ್ಕಾರಿ ಮಾಳ ಎಂದರೆ ಸರಿ. ಸುಬ್ರಹ್ಮಣ್ಯರಾವ್ ರವರ ಆಸ್ತಿಯ ಉತ್ತರಕ್ಕೆ ಬಸಪ್ಪ ರವರ ಜಮೀನು ಎಂದರೆ ಸಾಕ್ಷಿಯು ಸುಬ್ರಹ್ಮಣ್ಯರಾವ್ ರವರು ತಮ್ಮ ಹಿಸ್ಸೆಗೆ ಬಂದಿದ್ದ ಸರ್ವೇ ನಂಬರ್ 86ರ 2 ಎಕರೆ 5 ಗುಂಟೆಯನ್ನು ಸದರಿ ಬಸಪ್ಪ ರವರಿಗೆ ಮಾರಿರುವ ಜಮೀನು ಅದಾಗಿರುತ್ತದೆ ಎಂದು ನುಡಿಯುತ್ತಾರೆ. ಸುಬ್ರಹ್ಮಣ್ಯರಾವ್ ರವರ ಆಸ್ತಿಯ ದಕ್ಷಿಣಕ್ಕೆ ನಮಗೆ ಸೇರಿದ ಜಮೀನು ಇರುತ್ತದೆ ಎಂದರೆ ಸರಿ.

3. ಸುಬ್ರಹ್ಮಣ್ಯರಾವ್ ರವರು ಸರ್ವೇ ನಂಬರ್ 86 ರಲ್ಲಿ ತಮ್ಮ 2 ಎಕರೆ 5 ಗುಂಟೆ ಜಮೀನನ್ನು ಬಸಪ್ಪ ರವರಿಗೆ ಮಾರಾಟ ಮಾಡಿದ್ದಾರೆ ಎಂದು ತೋರಿಸಲು ಕ್ರಯಪತ್ರವನ್ನು ಹಾಜರುಪಡಿಸಿರುವುದಿಲ್ಲ. ಸುಬ್ರಹ್ಮಣ್ಯರಾವ್ ರವರು ಸದರಿ 2 ಎಕರೆ 5 ಗುಂಟೆ ಜಮೀನಿನ ಪೈಕಿ ಉತ್ತರ ಭಾಗದ 20 ಗುಂಟೆ ಆಸ್ತಿಯನ್ನು ಮಾತ್ರ ಬಸಪ್ಪ ರವರಿಗೆ ಮಾರಾಟ ಮಾಡಿದ್ದಾರೆ, ಉಳಿಕೆ 1 ಎಕರೆ 25 ಗುಂಟೆ ಆಸ್ತಿ ಸರ್ವೇ ನಂಬರ್ 86 ರಲ್ಲಿ ಸುಬ್ರಹ್ಮಣ್ಯರಾವ್ ರವರಿಗೆ ಉಳಿದಿದೆ ಎಂದರೆ ಸಾಕ್ಷಿಯು ಇಲ್ಲ, 2 ಎಕರೆ 5 ಗುಂಟೆಯನ್ನು ಮಾರಾಟ ಮಾಡಿದ್ದು, ಬಸಪ್ಪ ರವರ 3 ಮಕ್ಕಳು 2 ಎಕರೆ 5 ಗುಂಟೆ ಜಮೀನನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸುಬ್ರಹ್ಮಣ್ಯರಾವ್ ರವರು ಸರ್ವೇ ನಂಬರ್ 86 ರಲ್ಲಿ 1 ಎಕರೆ 25 ಗುಂಟೆ ಮತ್ತು ಸರ್ವೇ ನಂಬರ್ 87 ರಲ್ಲಿ 1 ಎಕರೆ 25 ಗುಂಟೆ ಆಸ್ತಿಯನ್ನು ಲಕ್ಷ್ಮಣರಾವ್ ರವರಿಗೆ ದಿಃ 29.10.2004 ರಂದು ಭೋಗ್ಯ ಮಾಡಿದ್ದಾರೆ ಎಂದರೆ ಸಾಕ್ಷಿಯು ಸರ್ವೇ ನಂಬರ್ 86 ರಲ್ಲಿ ಸುಬ್ರಹ್ಮಣ್ಯರಾವ್ ರವರಿಗೆ ಯಾವುದೇ ಜಮೀನು ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಭೋಗ್ಯ ಪತ್ರ ನೋಂದಣಿಯಾದ ದಿನಾಂಕದಿಂದಲೂ ಸುಬ್ರಹ್ಮಣ್ಯರಾವ್ ರವರು ಸರ್ವೇ ನಂಬರ್ 86 ರಲ್ಲಿ 1 ಎಕರೆ 25 ಗುಂಟೆ ಮತ್ತು ಸರ್ವೇ ನಂಬರ್ 87 ರಲ್ಲಿ 1 ಎಕರೆ 25 ಗುಂಟೆ ಜಮೀನಿನಲ್ಲಿ ಸ್ವಾಧೀನ ಇದ್ದು ಬೇಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

4. ಓಎಸ್ 69/2010ರ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಆ ದಾವೆಯನ್ನು ನನ್ನ ತಂದೆ ನಡೆಸಿದ್ದಾರೆ ಎಂದು ನುಡಿಯುತ್ತಾರೆ. ಸರ್ವೇ ನಂಬರ್ 87 ರಲ್ಲಿ 1 ಎಕರೆ 25 ಗುಂಟೆ ಜಮೀನನ್ನು ಸುಬ್ರಹ್ಮಣ್ಯರಾವ್ ರವರು ನರಸಿಂಗರಾವ್ ರವರಿಗೆ ಬಾಯಿಮಾತು ಮೂಲಕ ಭೋಗ್ಯ ಮಾಡಿ ರೂ.30,000/- ಹಣ ಪಡೆದು ಸ್ವಾಧೀನ ಕೊಟ್ಟಿದ್ದಾರೆ ಎಂದು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ತಿಳಿಸಿದ್ದು, ಅದು ಫೆಬ್ರವರಿ 2000ನೇ ಇಸವಿಯಾಗಿರುತ್ತದೆ, ದಿನಾಂಕ ನೆನಪಿಲ್ಲ. ವಾದಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಬ್ರಹ್ಮಣ್ಯರಾವ್ ರವರು ನನ್ನ ತಂದೆ ನರಸಿಂಗರಾವ್ ರವರಿಗೆ ಸರ್ವೇ ನಂಬರ್ 87 ರಲ್ಲಿ 1 ಎಕರೆ 25 ಗುಂಟೆ ಜಮೀನನ್ನು ಬಾಯಿ ಮಾತು ಮೂಲಕ ಭೋಗ್ಯ ಮಾಡಿ ರೂ,30,000/- ಹಣ ಪಡೆದು ಸ್ವಾಧೀನ ಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಓಎಸ್ 73/2024

ಡಿಡಬ್ಲ್ಯೂ 1

5. ಓಎಸ್ 66/2002ರ ದಾವೆಯನ್ನು ನನ್ನ ತಂದೆ ನರಸಿಂಗರಾವ್ ರವರ ಹಿಸ್ಸೆಗೆ ಬಂದಿರುವ ಸರ್ವೇ ನಂಬರ್ 86 ರಲ್ಲಿ 2 ಎಕರೆ 5 ಗುಂಟೆ ಮತ್ತು ಸರ್ವೇ ನಂಬರ್ 87 ರಲ್ಲಿ 1 ಎಕರೆ 25 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಮಾಲೀಕತ್ವ ಘೋಷಣೆ ಕೋರಿ ದಾವೆ ದಾಖಲಿಸಿದ್ದೆವು ಎಂದರೆ ಸರಿ. ಸುಬ್ರಹ್ಮಣ್ಯರಾವ್ ರವರು ಸರ್ವೇ ನಂಬರ್ 86 ರಲ್ಲಿ 1 ಎಕರೆ 25 ಗುಂಟ ಮತ್ತು ಸರ್ವೇ ನಂಬರ್ 87 ರಲ್ಲಿ 1 ಎಕರೆ 25 ಗುಂಟೆ ಜಮೀನನ್ನು ವಾದಿಗೆ ಭೋಗ್ಯ ಪತ್ರ ಮಾಡುವ ಸಮಯದಲ್ಲಿ ಮಾಲೀಕತ್ವ ಮತ್ತು ಸ್ವಾಧೀನ ಹೊಂದಿದ್ದರು ಎಂದರೆ ಸರಿಯಲ್ಲ. ಓಎಸ್ 66/2002ರ ದಾವ ಆಸ್ತಿಯ ಚೆಕ್ಕುಬಂದಿ ದಕ್ಷಿಣಕ್ಕೆ ಸುಬ್ರಹ್ಮಣ್ಯರಾವ್ ರವರ ಆಸ್ತಿ ಎಂದು ನಮೂದಿಸಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸುಬ್ರಹ್ಮಣ್ಯರಾವ್ ರವರಿಗೆ ಮಕ್ಕಳು ಇರುವುದಿಲ್ಲ. ಈ ಕಾರಣದಿಂದಾಗಿ ವಾದಿಯ ಸ್ವಾಧೀನದಲ್ಲಿರುವ ದಾವ ಆಸ್ತಿಯನ್ನು ಕಬಳಿಸುವ ಸಲುವಾಗಿ ದಿಃ 10.01.2024 ರಂದು ದಾವ ಜಮೀನಿನಲ್ಲಿ ಬೆಳೆದಿರುವ ಹುರುಳಿ ಫಸಲನ್ನು ನಾಶ ಮಾಡಿ ವಾದಿಗೆ ತೊಂದರೆ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ವಾದಿಗೆ ತೊದರೆ ಕೊಡಬೇಕು ಎಂಬುವ ದುರುದ್ದೇಶದಿಂದ ಸುಳ್ಳು ದಾಖಲಾತಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ